JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಜನ್ನ ಕಂಡ ಜೀವನ ಮೌಲ್ಯಗಳು : ಯಶೋಧರ ಚರಿತೆ ಆಧರಿಸಿ ಒಂದು ವಿಶ್ಲೇಷಣೆ

**ಡಾ. ಎಚ್. ಎಮ್. ಚನ್ನಪ್ಪಗೋಳ**
**ಸಹ ಪ್ರಧ್ಯಾಪಕ ಕನ್ನಡ ವಿಭಾಗ**
**ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ (ಸ್ವಾಯತ್ತ)**

ಮಾನವ ಮೂಲತಃ ಸಂಕೀರ್ಣ ಸ್ವಭಾವದವನು. ಒಂದು ಕಾಲ ಸಂದರ್ಭದಲ್ಲಿ ವೈಯಕ್ತಿಕ ಬದುಕನ್ನು ನಿರ್ದೇಶಿಸುವಲ್ಲಿ, ನಿಯಂತ್ರಿಸಿ ನಿರೂಪಿಸುವಲ್ಲಿ ಮೊದಮೊದಲು ಅನೌಪಚಾರಿಕ ನಿಯಂತ್ರಣವಿರುತ್ತದೆ. ನಂತರ ಅವೇ ಸಮಾಜದ ನೀತಿ, ನಿಯಮಗಳಾಗುತ್ತವೆ. ಸಂಪ್ರದಾಯ, ಲೋಕರೂಢಿ, ನೀತಿ, ನಿಯಮ, ಪರಂಪರೆ ಮುಂತಾದವುಗಳು ಮಾನವನ ಕ್ರಮಬದ್ಧ ಜೀವನ ರೂಪಣೆಯಲ್ಲಿ ಮಹತ್ವದ ಪಾತ್ರ ವಹಿಸಿವೆ. ಇವನ್ನೇ ಜೀವನ ಮೌಲ್ಯಗಳು ಎಂದು ಕರೆದಿದ್ದಾರೆ. ಈ ರೀತಿಯ ಮೌಲ್ಯಗಳೇ ಸಾಮಾಜಿಕ ಶಾಂತಿ ಮತ್ತು ಸುಭದ್ರತೆಗೆ ಕಾರಣವಾದ ಅಂಶಗಳಾಗುತ್ತವೆ. ಮನುಷ್ಯನ ದೌರ್ಬಲ್ಯ, ದೌರ್ಜನ್ಯಗಳನ್ನು ನಿಯಂತ್ರಿಸುವ ಆಯುಧಗಳಂತೆ ಕಾರ್ಯ ನಿರ್ವಹಿಸುತ್ತವೆ; ಪುರಾತನ ಸಮಾಜವನ್ನು ನಿಯಂತ್ರಿಸುವಲ್ಲಿ ಫಲಕಾರಿಯಾಗಿವೆ. ಮೊದಮೊದಲು ವ್ಯಕ್ತಿಗತವಾದ ಮೌಲ್ಯಗಳೇ ಸಾಮಾಜಿಕ ಮೌಲ್ಯಗಳಾಗಿವೆ. ವ್ಯಕ್ತಿ–ಸಮುದಾಯ ಸಮಾಜಗಳಿಗೆ ಆಗಬಹುದಾದ ಜೀವ, ಅರ್ಥ, ಮಾನಹಾನಿಗಳನ್ನು ನಿಯಂತ್ರಿಸಲು ಮಾನವ ರೂಪಿಸಿಕೊಂಡ ವ್ಯವಸ್ಥೆಯೇ 'ಮೌಲ್ಯ'ಗಳಾಗಿವೆ.

ಇನ್ನು **'ಜನ್ನ'**ನ "ಯಶೋಧರ ಚರಿತೆ"ಗೆ ಬಂದರೆ ಅಲ್ಲಿ ಅನೇಕ ಮೌಲ್ಯಗಳ ಪ್ರತಿಪಾದನೆ ಆಗಿರುವುದನ್ನು ನಾವು ಕಾಣುತ್ತೇವೆ. ವಿಶೇಷವಾಗಿ "ಮಾನಹಾನಿ ಮತ್ತು ಜೀವಹಾನಿ ಮೌಲ್ಯಗಳು" ಎದ್ದು ತೋರುತ್ತವೆ.

ಸಮಾಜದಲ್ಲಿ ಗಂಡಸಿನ ಲೈಂಗಿಕ ತೃಪ್ತಿಗೆ 'ವೇಶ್ಯಾವಾಟಿಕೆ' ಎಂಬ ಸರ್ವಸಮ್ಮತವಲ್ಲದಿದ್ದರೂ ಉಪವ್ಯವಸ್ಥೆ ಒಂದು ಇದೆ. ಆದರೆ ಗಂಡನಿದ್ದು ಹೆಣ್ಣು ತನ್ನ ಗಂಡನನ್ನುಳಿದು ಅನ್ಯ ಪುರುಷನೊಂದಿಗೆ ಸೇರಿದರೆ, ತನ್ನ ಪುರುಷನನ್ನು ಪಡೆಯದ, ಗಂಡನಿಲ್ಲದ ಹೆಣ್ಣು ಕೂಡಾ ವ್ಯವಸ್ಥೆ ಬಾಹಿರವಾಗಿ ತನ್ನ ಬಯಕೆ ಈಡೇರಿಸಿಕೊಂಡರೆ ಅವಳನ್ನು "ಜಾರೆ" ಎಂದು ಸಮಾಜ ಗುರುತಿಸುತ್ತದೆ. ಇಂತಹ ಜಾರತ್ವದ ಸಂದರ್ಭದಲ್ಲಿ ಸಾಮಾನ್ಯವಾಗಿ ಮೂರು ವ್ಯಕ್ತಿಗಳು ಇರುವುದುಂಟು. ಒಂದು ಹೆಣ್ಣು ಎರಡು ಗಂಡು, ಒಂದು ಗಂಡು ಎರಡು ಹೆಣ್ಣು ತೊಡಗಿಸಿಕೊಂಡಿರುವುದು ಸಾಮಾನ್ಯವಾಗಿದ್ದರೂ ಒಂದು ಗಂಡು ಎರಡು ಹೆಣ್ಣಿನ ಸಂಬಂಧ ಅಷ್ಟೇನು ಸಾಮಾಜಿಕ ಸಮಸ್ಯೆಯಾಗಿ ಮೌಲ್ಯ ಕುಸಿತವಾಗಿ ತೋರಿಬಂದಿಲ್ಲ. ಆದರೂ ಅದನ್ನು ಸಾಮಾಜಿಕ ಮೌಲ್ಯಕ್ಕೆ ವಿರುದ್ಧವಾದ ಅಪರಾಧ ಎಂದೇ ಗುರುತಿಸಿದ್ದಾರೆ. ಇನ್ನು ಯಾವುದೇ ಕಾಲ ಸಂದರ್ಭದಲ್ಲಿ ಒಂದು ಹೆಣ್ಣು ಎರಡು ಗಂಡಿನ ಸಮಸ್ಯೆ ಜಟಿಲವಾಗಿಯೇ ತೋರಿದೆ. ಸಾಮಾಜಿಕ ಮೌಲ್ಯಕ್ಕೆ ವಿರುದ್ಧವಾಗಿ, ಇಂಥ ಸಮಸ್ಯೆಯಲ್ಲಿ ಸಿಲುಕಿಕೊಂಡ ಹೆಣ್ಣು ಅಥವಾ ಸ್ತ್ರೀಯನ್ನು 'ಜಾರೆ'ಯೆಂದು ಹೀಗೆಳೆದಿದೆ, ವ್ಯಕ್ತಿ–ಧರ್ಮ–ಸಮಾಜ, ನ್ಯಾಯದ ದೃಷ್ಟಿಯಲ್ಲಿ ಅವಳನ್ನು ಅಪರಾಧಿ ಎಂಬಂತೆ ನಿಂದಿಸಿದೆ. ಇಂತಹುದ್ದಕ್ಕೆ ಇನ್ನೊಂದು ಮುಖ್ಯವಾದ ಕಾರಣವೆಂದರೆ ಹಿಂದಿನಿಂದಲೂ ಸಮಾಜದಲ್ಲಿ ಮಹಿಳೆಗೆ ಗೌರವದ ಸ್ಥಾನಮಾನ ಕಲ್ಪಿಸಿದ್ದಾಗಿದೆ. ಮಹಿಳೆ ಪವಿತ್ರಳಾಗಿರಬೇಕು ಎಂಬುದು ಸಮಾಜದ ಪ್ರತಿಯೊಬ್ಬರ ಬಯಕೆ ಕೂಡ. ಹಾಗೆಂದೆ ಪ್ರಾಚೀನ ಕಾಲದಿಂದಲೂ ಸಮಾಜದಲ್ಲಿ ಸ್ತ್ರೀಯನ್ನು ಮಾತೆ ಎಂತಲೋ, ಭಗಿನಿಯಂತಲೇ ಗೌರವಿಸುತ್ತ ಬಂದಿರುವುದನ್ನ ಕಾಣುತ್ತೇವೆ. ಆ ಗೌರವಕ್ಕೆ ಸ್ತ್ರೀಗೆ ಅತಿ ಮುಖ್ಯವಾದುದು ಆಕೆಯ ಶೀಲವೆಂದು ನಂಬಲಾಗಿದೆ. ಈ ಶೀಲ ಅಥವಾ ಪತಿವ್ರತಾ ಧರ್ಮವೇ ಅನೇಕ ಸ್ತ್ರೀಯರನ್ನೂ ದೇವತೆಗಳಿಗೆ ಸಮಾನರಾಗುವಂತೆ ಮಾಡಿದೆ.

ಪ್ರಾಚೀನ ಕಾಲದಿಂದಲೂ ಸ್ತ್ರೀಯ ಮರ್ಯಾದೆಗೆ, ಚಾರಿತ್ರ್ಯಕ್ಕೆ ಅಥವಾ ಶೀಲಕ್ಕೆ ಒಂದು ಮಹತ್ವವಿದೆ. ಈ ಜಾರತನಕ್ಕೆ ದೈಹಿಕ, ಮಾನಸಿಕ, ಸಾಂದರ್ಭಿಕ ಕಾರಣಗಳಿರಬಹುದಾಗಿದೆ. ಅಂಥವುಗಳಲ್ಲಿ ರಾಜಮನೆತನದ ಸ್ತ್ರೀಯರೂ ಸಾಮಾನ್ಯ ಮಹಿಳೆಯರೂ ತೊಡಗಿದ ಉಲ್ಲೇಖಗಳು ಅನೇಕ ಕಾವ್ಯಗಳಲ್ಲಿ ಸಿಗುತ್ತವೆ.

ಜನ್ನ ಕವಿಯ ಯಶೋಧರ ಚರಿತೆಯಲ್ಲಿ ರಾಣಿಯಾದ ಯಶೋಧರನ ಹೆಂಡತಿ ಅಮೃತಮತಿ ವ್ಯಭಿಚಾರದಲ್ಲಿ ತೊಡಗಿದ ಕಥೆ ಅಡಗಿದೆ. ಯಶೋಧರ ಚರಿತೆಯಲ್ಲಿ ಯಶೋಧರನು ಕಬ್ಬಿನ ಬಿಲ್ಲಿಗೂ ನನೆಯ ನಾರಿಗೂ ಜಗಮೋಹನ ಬಾಣವು ಹುಟ್ಟುವಂತೆ(2–5) ಮಾತ್ರವಲ್ಲ ಸಣ್ಣವನಿರುವಾಗಲೇ ಸೌಂದರ್ಯದ ಮೂರ್ತಿಯಾಗಿ ಅವಳನ್ನು ನೋಡುವುದೆಂದರೆ ಕಣ್ಣುಗಳಿಗೆ ಹಬ್ಬ(2–6) ಎಳೆಯ ಬೆಳದಿಂಗಳು, ಪುಷ್ಪಬಾಣ, ಮಲಯ ಮಾರುತ ಇವುಗಳ ಆಕರ್ಷಣೆ ಪಡೆದವನು ಇಂಥವನ 'ಮನಃಪ್ರಿಯೆ' ಅಮೃತಮತಿ. ಯಶೋಧರನು ಅಮೃತಮತಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದನು.(2–9) ಹಾಗೆಯೇ ಯಶೋಧರ ಕೂಡಾ ಅರಸನಾದ್ದರಿಂದ ಐಶ್ವರ್ಯವಂತ ಅಲ್ಲದೇ, ಅರಸುತನದಲ್ಲಿಯೂ ಕೂಡಾ ದುರ್ಬಲನೂ ಅಲ್ಲ, ಹೇಡಿಯೂ ಅಲ್ಲ. ಯಾವ ದುರ್ಗುಣವನ್ನು ಪಡೆದಿದ್ದನೆಂದಲ್ಲ. ಇಂತಹ ಯಶೋಧರನ ಪತ್ನಿ ಅಮೃತಮತಿ ಆತನಿಗೆ 'ಮನಃಪ್ರಿಯೆ'

> ಅಮೃತಮತಿ ಗಂಡ ಯಶೋಧರ
> ನಮನಃಪ್ರಿಯೆ ಆಕೆ ದೀವಮಾಗೆ ಪುಳಿಂದಂ
> ಸುಮನೋ ಬಾಣಂ ತದ್ಭೂ
> ರಮಣನನೊಲಿದಂತೆ ಗೋರಿಗೊಳಿತ್ತಿರ್ಕುಂ (2–9)

ಇದರ ಪ್ರಕಾರ ಯಶೋಧರನು ಅಮೃತಮತಿಯಿಂದ ಆಕರ್ಷಿನಾಗಿದ್ದನು. ಏಕೆ? ಕಾಮನ ಪ್ರಭಾವದಿಂದ ಎಂಬುದು ಸ್ಪಷ್ಟ. ಎಂದರೆ ಯಶೋಧರನಲ್ಲಿ ಕಾಮುಕತೆಯಿತ್ತೆಂದು ಸಾಧಿಸುವಂತಿದೆ ಈ ಮಾತು. ಹಾಗೆಯೇ ಅಮೃತಮತಿ ಈತನಿಗೆ ಒಲಿದಿದ್ದಳೆ? ಎಂಬ ಪ್ರಶ್ನೆ ಕಾಡುತ್ತದೆ.

ಬೇಟೆಗಾರನ ದೀವಕ್ಕೆ ತನ್ನಿಂದಾಗಿ ಗೋರಿಕೊಳ್ಳುವ ಪ್ರಾಣಿಯಲ್ಲಿ ಪ್ರೀತಿ, ಆಸಕ್ತಿ ಉಳಿಯುವುದೇ? ಮಾತ್ರವಲ್ಲ. ಬೇಟೆಗಾರನು ಅದೇ ದೀವವನ್ನು ಇನ್ನೊಂದು ಪ್ರಾಣಿಯನ್ನಾಕರ್ಷಿಸಲು ಬಳಸುತ್ತಾನೆ. ಆ ಪ್ರಾಣಿಯೂ ಹಾನಿಗೊಳಗಾಗುತ್ತದೆ. ಇದನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಪರಿಭಾವಿಸಿದರೆ, ಯಶೋಧರನು ಅಮೃತಮತಿಯಲ್ಲಿ ಅನುರಕ್ತನಾಗಿದ್ದನೇ ಹೊರತು, ಅಮೃತಮತಿ ಅವನಲ್ಲಿ ಅನುರಕ್ತೆಯಾಗಿದ್ದಳು ಎನ್ನುವಂತಿಲ್ಲ. ಆದರೆ ಮುಂದೆ,

> 'ಅಮೃತಮತಿ ಸಹಿತಮಾ ಚಂ
> ದ್ರಮತಿಯ ಸುತನಂತು ಮೆರೆವ ಧವಳಾರದೊಳ
> ಭ್ರಮುವೆರಸಭ್ರಗಜಂ ವಿ
> ಭ್ರಮದಿಂದಂ ಸೆಜ್ಜರಕ್ಕೆ ಬಂದವೊಲೆಸೆಗುಂ (2–21)

ಎಂಬ ಪದ್ಯ ಬರುತ್ತದೆ. ಸಾಲದುದಕ್ಕೆ "ಖಚರದಂಪತಿಗಳವೊಲ್ ತಾಮೆಸೆದರ್"(2–22) ಎಂದು "ಮನೋಜನಾಡಿಸುವ ಜಂತ್ರದಂತಿರೆ ನೆರೆದರ್"(2–24) ಎಂದೂ ಆ 'ಹೃದಯಪ್ರಿಯ'ರ ವಿಷಯ ಮಾತು ಬರುತ್ತದೆ. ಇವುಗಳಿಂದ ಅವರಿಬ್ಬರೂ ಪರಸ್ಪರ ಪ್ರೇಮಬದ್ಧರಾಗಿದ್ದರೆಂದು ವಾದಿಸಬಹುದಾದರೂ, ಮುಂದಣ ಅಮೃತಮತಿಯ ವರ್ತನೆಯನ್ನು ನೋಡಿದಾಗ ಅವೆಲ್ಲ ಕೇವಲ ಅಲಂಕಾರಿಕ ಮಾತುಗಳೆಂದು ಹೇಳಬೇಕಾಗುತ್ತದೆ.

ಒಂದು ದಿನ ಯಶೋಧರನು ಬಹು ಸಂಭ್ರಮದಿಂದ ಅಮೃತಮತಿಯ ಶಯ್ಯಾಗಾರಕ್ಕೆ ಬಂದು ಕಾಮಕೇಳಿಯಲ್ಲಿ ತೊಡಗಿಕೊಳತ್ತಾನೆ.

> ತನುಸೋಂಕಾಲಿಂಗನ ಚುಂ
> ಬನದೆ ಸುರತದಿಂ ಸವಿ ರತಪ್ರೌಢಿಯಿನಾ
> ತನುವಂ ಮರೆಯಿಸೆ ಅರಿಯದೆ
> ಮನೋಜನಾಡಿಸುವ ಜಂತ್ರದಂತಿರೆ ನೆರೆದರ್ (2–24)
> ಸುರತ ಸುಖಪಾರವಶ್ಯಂ
> ತರೆ ನಿದ್ರಾಭರಮನಿರ್ವರುಂ ಶಿಥಿಲತನೂ
> ಪರಿರಂಭಣದಚ್ಚಳಿಯದೆ
> ಪರಿವೇಷ್ಟಿತ ಬಾಹುವಳಯದೊಳ್ ಕಣ್ಗಯ್ದರ್ (2–25)

ಎಂಬಲ್ಲಿ ಇಬ್ಬರೂ ಕಾಮಕೇಳಿಯಾಡಿ ಸಂತೃಪ್ತಿಯಿಂದ ಮಲಗಿದ ರಾತ್ರಿಯೇ

ಹೃದಯ ಪ್ರಿಯರಂತೊರಗಿದ
ಪದದೊಳ್ ಗರಟಿಗೆಯ ಜಾವದುಕ್ಕಡದುಲಿ ಮ
ಗ್ಗಿದ ಪೊತ್ತು ಸೂಳ್ಗೆ ಕುರುಮಾ
ಡದ ಪಕ್ಕದೊಳಿರ್ದ ಪಟ್ಟದಾನೆಯ ಬದಗಂ (2–27)

ಬಿನದಕ್ಕೆ ಪಾಡುತ್ತಿರೆ ನು
ಣ್ದನಿ ನಿದ್ರೆಗೆ ಕತಕಬೀಜಮಾಯ್ತೆನೆ ಮೃಗಲೋ
ಚನೆ ತಿಳಿದಾಲಿಸಿ ಮುಟ್ಟಿದ
ಮನಮನೆ ತೊಟ್ಟನೆ ಪಸಾಯದಾನಂಗೊಟ್ಟಳ್ (2–28)

ಪಟ್ಟದಾನೆಯ ಬದಗನು ವಿನೋದಕ್ಕೆ ಹಾಡುತ್ತಿದ್ದಾಗ, ಅದನ್ನು ಕೇಳಿ ಅಮೃತಮತಿ ತನ್ನ ಮನಸ್ಸನ್ನೂ ತೊಟ್ಟನೆ ಏನೂ ವಿಚಾರ ಮಾಡದೇ ಪಸಾಯದಾನ ಕೊಟ್ಟಳಂತೆ! ಅವಳ ಮನಸ್ಸು 'ಮಾವನ್ನು ಮೆಚ್ಚದ ಮನಸ್ಸಾಗಿತ್ತು; ಅದು ಬೇವನ್ನೇ ಬಯಸುತ್ತಿತ್ತು'. ಪಂಚೇಂದ್ರಿಯಗಳಲ್ಲಿ ಶ್ರವಣೇಂದ್ರಿಯವೊಂದರ ಆಕರ್ಷಣೆ ಅವಳಿಗೆ ತೀವ್ರವಾಯಿತು. ಅನಂತರವೇ ಆಕೆಗೆ ಆತನೊಡನೆ 'ನೋಡುವ ಕೂಡುವ ಚಿಂತೆ ಕಡಲ್ವರಿದುದು'(2–32)

ಯಾವುದಾದರೊಂದು ವ್ಯಕ್ತಿಯ ಹೆಸರು ಕೇಳಿದಾಗ ಅವನ ಹಿರಿಮೆಯನ್ನೋ, ಕೀಳರಿಮೆಯನ್ನೋ ಕೇಳಿದಾಗ, ನಾವೂ ಅವನ ಸ್ವರೂಪವನ್ನು ಕಲ್ಪಿಸಿಕೊಳ್ಳುವಂತೆ ಅಮೃತಮತಿಯೂ ಕೂಡಾ ಇಂಪಾದ ಹಾಡು ಕೇಳಿ ಹಾಡುವವನು ಅತ್ಯಂತ ಸುಂದರನಾಗಿರಬಹುದೆಂದು ಕಲ್ಪಿಸಿಕೊಂಡಿರಬಹುದಾಗಿದೆ. ಅಂತೆಯೇ ಬೆಳಕಾಗುವವರೆಗೂ ಕಾತರಳಾಗಿ ಕಾಯ್ದು ಬೆಳಕಾದ ಕೂಡಲೆಯೇ,

ಮನದನ್ನಳಪ್ಪ ಕೆಳದಿಗೆ
ಮನಮಂ ಮುಂದಿಟ್ಟು ಬಳಿಕ ಕಳಿಪಿದೊಡವಳಾ
ತನ ರೂಪುಗೊಂಡು ಕಣ್ಗಂ
ಮನಕ್ಕಮುದ್ಗಾರವೆತ್ತು ಘೋಂಕನೆ ಮಗುಳ್ದಳ್ (2–33)

ಅಮೃತಮತಿಯೆತ್ತ ರೂಪಾ
ಧಮನಷ್ಟಾವಂಕನೆತ್ತ ಚಿತ್ರಮಪಾತ್ರೇ
ರಮತೇ ನಾರೀ ಎಂಬುದು
ಸಮನಿಸಿದುದು ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ (2–34)

ಎಂದು ಆತನ ರೂಪು ಕಂಡು ಮನಸ್ಸಿನಲ್ಲಿ ಹಳಹಳಿಸುತ್ತಾ ಬಂದು, ವ್ಯಂಗ್ಯವಾಗಿ ಆತನ ಚಲ್ವಾದ ರೂಪವನ್ನು ಹೇಳಿ ಕೊನೆಗೆ ಅಷ್ಟಾವಂಕನಾದ ಆ ರೂಪಧಮನ ವರ್ಣನೆಯನ್ನು ಮಾಡಿದಾಗ, ಅಮೃತಮತಿ ಒಮ್ಮೆ ವಿಹ್ವಲಳಾದಳು. ನಿಜ. ಆದರೆ 'ಮೆಚ್ಚಿದವರಿಗೆ ಮಸಣ ಸುಖ' ಎಂಬಂತೆ 'ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್'(2–42) ಎಂದು ಇನ್ನೂ ಮುಂದುವರೆಸಿ

ಒಲವಾದೊಡೆ ರೂಪಿನ ಕೋ
ಟಲೆಯೇವುದೋ ಕಾರ್ಯಮಾಗೆ ಕಾರಣದಿಂದಂ
ಫಲಮೇನಿಂದೆನಗಾತನೆ
ಕುಲ ದೈವಂ ಕಾಮದೇವನಿಂದ್ರಂ ಚಂದ್ರಂ

ಎನ್ನುತ್ತಾಳೆ. ಇದರಿಂದ ಕೂಡಾ ಯಶೋಧರನ ರೂಪದಲ್ಲಿ ಅವಳಿಗೆ ಒಲವಾಗಿರಲಿಲ್ಲ. ಏಕೆಂದರೆ ಅವನಲ್ಲಿ ಪೊಲ್ಲಮೆಯೆ ಇಲ್ಲ ಎಂದೇ ಹೇಳಿದಂತಾಗುತ್ತದೆ. ಹಾಗೆಂದು ಅವಳಿಗೆ ಆ ವಿಕಟಾಂಗನಲ್ಲಿ ರತಿ ಫಲಾಸ್ವಾದನದಲ್ಲಿ ರುಚಿಯಾಯಿತಂತೆ! ಅವಳಿಗೆ ಬರಿಯ ಕಾಮ ತೃಪ್ತಿಯ ಕಡೆಗೆ ಒಲವಿದ್ದೀತೆ ಹೊರತು ರೂಪ–ಗುಣಗಳ ಕಡೆ ಒಲವಿರಲಿಲ್ಲ. ಆ ತೃಪ್ತಿ ಅಷ್ಟಾವಂಕನಿಂದ ದೊರೆಯುವ ನಿರೀಕ್ಷೆ ಅವಳದು.

ಅಷ್ಟಾವಂಕನು ಎಷ್ಟು ಕುರೂಪಿಯೋ ಮತ್ತು ಕುತ್ಸಿತನೋ ಅಷ್ಟೇ ಕ್ರೂರನೂ ಹೌದು. ಅಮೃತಮತಿ ಈ ಜಾರನಲ್ಲಿಗೆ ಬಂದಾಗ ಒಮ್ಮೆ ವಿಳಂಬವಾದುದ್ದಕ್ಕೆ ಆತನು ಅವಳ ಸ್ಥಾನ–ಮಾನ–ರೂಪ–ಯೌವ್ವನ ಮುಂತಾದ ಯಾವುದನ್ನು ಲೆಕ್ಕಿಸದೆ ಅವಳ ಮೇಲೆ ಒಂದಿಷ್ಟೂ ಒಲವಿಲ್ಲದೇ, ಅವಳ ಸೌಕುಮಾರ್ಯವನ್ನು ಗಣನೆಗೆ ತಾರದೆ ಅವಳ 'ಕರುಳ್ಗಳನೆಳೆದು ಬೆನ್ನ ಮಿಳಿಯಂ ಕಳಹಂಸೆಗೆ ಗಿಡಿಗನೆರಗಿದಂತಿರೆ ಬಡಿದನು'.(2–49) ಇಷ್ಟೇ ಅಲ್ಲ 'ತೋರಮುಡಿವಿಡಿದು ಕುಡಿಯಂ ನಾರಂ ತದೆವಂತೆ ತದೆದು

ಬೀಟೆಯ ಕಾಲಿಂ ಬಾರೇಳೆ ಬದಗನೊಗೆದನು'.(2–50) ಇಂತಹ ಕ್ರೌರ್ಯತೆಯೂ, ದಯಾಶೂನ್ಯತೆಯೂ ಅವನ ಆಕಾರಕ್ಕೆ, ಸಂಸ್ಕಾರಕ್ಕೆ, ಹುಟ್ಟಿಗೆ ತಕ್ಕುದಾದದ್ದೇ. ಆದರೆ ಅವಳು ಆಗಲೂ 'ಕೇರೆ ಪೊರಳ್ವಂತೆ ಅವನ ಕಾಲಮೇಲೆ ಪೊರಳ್ದಳು' (2–50) ಆಗ ಅವಳಿಗೆ ಸುಂದರನೂ ದಯಾ ಪರನೂ ಆದ ಯಶೋಧರನು 'ಅರಸನೆಂಬ ಪಾತಕ'(2–52)ನಾಗಿಬಿಡುತ್ತಾನೆ. ಆಗಲೂ ಆಕೆ 'ಕಿವಿಸವಿ ದನಿ ಕಣ್ಸವಿ ರೂಪವಧರಿಸೆಲೆ ಗಜವೆಡಂಗನೀನುಳಿದೊಡೆ ಸಾವವಳ್'(2–52) ಎನ್ನುತ್ತಾಳೆ. ಅವನ ಕರ್ಣಾನಂದಕರವಾದ ಗೀತಕ್ಕೆ ಅವಳು ಸೋತುಹೋದುದು ನಿಜವಾದರೂ ಆಮೇಲೆ ಅವನ ಗೀತವನ್ನು ಕೇಳಿದುದಾಗಲಿ, ಅವನು ಹಾಡಿದುದಾಗಲಿ ಇಲ್ಲವೇ ಇಲ್ಲ. ಎಂದಮೇಲೆ ಅವಳು ಯಶೋಧರನಲ್ಲಿ ಅನುರಕ್ತಳಾಗಿ ಇರಲೇ ಇಲ್ಲ; ಅವಳು ಮೊದಲು ಮೋಹಗೊಂಡುದು ಬದಗನ ಹಾಡಿನ ಸಕೃಚ್ಛ್ರವಣಕ್ಕೆ; (ಸಕೃತ್–ಶ್ರವಣಕ್ಕೆ) ಅನಂತರ ಅವನ ವಕ್ರಾಕಾರವನ್ನು ಕಣ್ಣಿಗೆ ಸವಿಯೆಂದು ಸಮಾಧಾನ ತಂದುಕೊಂಡುದುದು ಎಂಬುದನ್ನು ತಿಳಿಯಬಹುದು. ಯಶೋಧರನಿಗೂ ಪೆಣ್(ಅಮೃತಮತಿ) ತಪ್ಪಿ ನಡೆದಳೆಂದು ಕಂಡಿತಲ್ಲದೇ ಅಷ್ಟಾವಂಕನಲ್ಲಿ ಅವನು ಅಪರಾಧವನ್ನು ಕಾಣಲಿಲ್ಲ. ಒಮ್ಮೆ ಅವರಿಬ್ಬರನ್ನು ಎರಡು ಭಾಗ ಮಾಡಬೇಕೆಂದು ಕತ್ತಿಯೆತ್ತಿದ್ದನಾದರೂ ಅದು ಬರಿಯ ರೋಷದಿಂದ, ಇಲ್ಲಿಯೂ ಸ್ತ್ರೀ ಮಾತ್ರ ಶೀಲವಂತೆಯಾಗಿರಬೇಕೆಂಬ ಮೌಲ್ಯದ ಪ್ರತಿಪಾದನೆಯನ್ನೇ ಕಾಣುತ್ತೇವೆ. ಆ ಮೌಲ್ಯ ಗಂಡಸಿಗೆ ಸಂಬಂಧಿಸಿದ್ದಲ್ಲ ಎಂಬುವುದರ ಪ್ರತಿಪಾದನೆ ಇದೆ.

ಅಮೃತಮತಿಗೆ ತನ್ನ ವ್ಯಭಿಚಾರವು ರಾಜನಿಗೆ ಗೊತ್ತಾಯಿತೆಂದು ತಿಳಿದು ಬಂದಾಗ ಅವನ ಕೊಲೆಗೂ ಮುಂದಾಗುತ್ತಾಳೆ. ವಿಷ ಊಣಿಸಿ ಕೊಲ್ಲುತ್ತಾಳೆ. ತನ್ನ ಕಾಮಕ್ಕೆ ಅಡ್ಡಿಯಾಗುವವನ ಮೇಲೆ ಕ್ರೋಧ ಉಂಟಾದುದು ಇದಕ್ಕೆ ಕಾರಣ. ಯಶೋಧರ ಸತ್ತಮೇಲೆ ತನ್ನ ನಲ್ಲ(ಬದಗ)ನನ್ನು ತನ್ನ ಅರಮನೆಯಲ್ಲಿಯೇ ಇರಿಸಿಕೊಳ್ಳುತ್ತಾಳೆ. ಈ ಕ್ರಮವನ್ನು ಆಕೆಯ ಮಗ(ಅಂದಿನ ರಾಜ) ಯಶೋಮತಿ ಏಕೆ ತಡೆಯಲಿಲ್ಲವೋ ತಿಳಿಯಲಿಲ್ಲ. ಸಾಮಾನ್ಯ ಜನರೂ ಅಮೃತಮತಿಯ ನೀಚ ವರ್ತನೆಯ ಕುರಿತು ಮಾತನಾಡುತ್ತಿದ್ದುದರಿಂದ ಆತನಿಗೆ ಇದು ತಿಳಿದೇ ಇರುತ್ತದೆ. ಅಲ್ಲದೇ 'ತೊನ್ನನ ಕೂಟದಿಂದ ನಿನಗೂ ತೊನ್ನು ಉಂಟಾಗಿದೆ; ಈ ರೋಗಕ್ಕೆ ಮದ್ಯ ಮಾಂಸಗಳು ವಿಷವೆಂದು ಹೇಳಿದರೂ ಅವಳು ಮಗನ ಮಾತನ್ನು ಮನ್ನಿಸುವುದಿಲ್ಲವಂತೆ; ಅಂದಾಗ ರಾಜನಾದ ಆತನಿಗೂ ಅವಳನ್ನು ತಡೆಯುವ, ದಂಡಿಸುವ ಸಾಮರ್ಥ್ಯ ಇರಲಿಲ್ಲವೇ? ಅಥವಾ 'ಮಾತೃದೇವ'ನಾಗಿ ಬಿಟ್ಟನೇ ಅಥವಾ ಪ್ರಸ್ತುತ ಅನೇಕ ಶ್ರೀಮಂತರ ಮತ್ತು ಮೇಲಾಧಿಕಾರಿಗಳ ಹಾದರದ ಕೆಲಸ ಅಪಮೌಲ್ಯವಾದರೂ ಮೌಲ್ಯವಾಗಿತ್ತು ಎಂಬುವುದರ ಪ್ರತಿಪಾದನೆಯೇ ಎಂದು ಭಾವಿಸಬೇಕಾಗುತ್ತದೆ.

ಒಟ್ಟಾರೆಯಾಗಿ ಅಮೃತಮತಿ ಬರೀ ಕಾಮುಕ ಸ್ತ್ರೀ; ಅವಳಿಗೆ ಬದಗನ ಇಂಪಾದ ಹಾಡೇ ಮರುಳುಗೊಳಿಸುವ ಆಕರ್ಷಣೆಯಾಯಿತು. ಆತನಿಗಾಗಿ ಹುಚ್ಚಾದ ಆಕೆ ತಾನಾಗಿ 'ತಿಳಿ'ಯಾಗಲಿಲ್ಲ; ಉಳಿದವರು 'ತಿಳಿ'ಯಾಗಿಸಲು ಯತ್ನಿಸಲಿಲ್ಲ; ಯತ್ನಿಸಿದ್ದರೂ ಅವರು ಸಫಲಾಗಿರಲಾರರು. ಅವಳು ಕಾಮದ ಕೈಗೊಂಬೆಯಾಗಿದ್ದಳು. ಅದಕ್ಕಾಗಿಯೇ ಅಡ್ಡಿಯಾಗಬಹುದಾದ ಗಂಡನನ್ನು, ಅತ್ತೆಯನ್ನೂ ವಿಷವಿಕ್ಕಿ ಕೊಲ್ಲುವ ಕ್ರೋಧಕ್ಕೆ ಒಳಗಾಗಿ ಬದುಕಿದ್ದಾಗಲೇ ಕುಷ್ಠರೋಗದಿಂದ ಕೊಳೆತು ಸತ್ತ ಮೇಲೆ 'ಧೂಮ ಪ್ರಭೆ'ಯೆಂಬ ಐದನೇ ನರಕದಲ್ಲಿ ಮುಳುಗಿದಳು. ಇಲ್ಲಿ ಜೈನ ಧರ್ಮದ ಅಥವಾ ಇನ್ನಾವುದೇ ಧರ್ಮದ ಪ್ರಕಾರ ಮನುಷ್ಯನ ಅಂತಿಮ ಗುರಿ ಮೋಕ್ಷ ಹೊಂದುವುದು ಮೌಲ್ಯವಾಗಿದೆ. ಆದರೆ ಅನೈತಿಕ ಕಾರ್ಯದಲ್ಲಿ ತೊಡಗಿದ ವ್ಯಕ್ತಿಗೆ ಮೋಕ್ಷ ಸಿಗದೇ ಪಾಪದ ಫಲವಾಗಿ ಅತೀ ಕೆಟ್ಟದಾದ ನರಕವೇ ಪ್ರಾಪ್ತಿಯಾಗುತ್ತದೆ, ಎಂಬ ಮೌಲ್ಯದ ಪ್ರತಿಪಾದನೆ ಆಗಿದ್ದನ್ನು ಕಾಣುತ್ತೇವೆ.

ಬದಗನನ್ನು ಒಲಿದ ಅಮೃತಮತಿ ಕೊನೆಯವರೆಗೂ ಅವನನ್ನೇ ಆರಾಧಿಸಿದರೂ ಅವಳ ಪ್ರಣಯ ಶುದ್ಧವಾದುದೆನ್ನಬಹುದೇ? ಹಾಗಿದ್ದರೆ ಅಧರ್ಮದ ವರ್ತನೆಯನ್ನೇ ಸರಿಯೆಂದು ಸಮರ್ಥಿಸಿ ಅದನ್ನೂ ಒಂದು ಮೌಲ್ಯ ಎನ್ನಬಹುದೇ? ಕೊನೆಗೆ ಆತನಾದರೂ ಅವಳನ್ನು ಒಲಿದಿದ್ದನೇ? ಇಲ್ಲವೇ ಇಲ್ಲ, ಆಕೆಯ ಸ್ಥಾನಮಾನ, ರೂಪ ಎಲ್ಲ ಗೊತ್ತಿದ್ದೂ ಒದೆದಿದ್ದ. ತಾನಾಗಿಯೇ ಕಾಮಿಸಿ ಬಂದ ಅಮೃತಮತಿಗೆ ಆತನೆಂದೂ ಆಧರಿಸಲಿಲ್ಲ. ಆ'ಜಾರ'ನಿಗೆ ಅವಳಲ್ಲಿ ಎಂದೂ ದಯೆಯೂ ಇರಲಿಲ್ಲ, ಸ್ನೇಹವೂ ಇರಲಿಲ್ಲ. ಇದರಿಂದ ಸಿದ್ಧವಾಗುವುದು ಒಂದೇ ಒಂದು; ಅಮೃತಮತಿ ಬರಿಯ ಕಾಮುಕ ಸ್ತ್ರೀ; ಜಾರೆ; ಜಾರಿದವಳು; ತಾನಾಗಿಯೇ ಜಾರುವುದಕ್ಕೆ ಹೋದವಳು; ಅದನ್ನೇ ಮೆಚ್ಚಿದವಳು; ಅವಳ ವರ್ತನೆ ಸರ್ವಥಾ ನಿಂದನೀಯ; ಸರ್ವಾತ್ಮಾನಾ ಖಂಡನೀಯ! ಎಂಬ ಮೌಲ್ಯವನ್ನು ಜನ್ನ ಬಲವಾಗಿ ಪ್ರತಿಪಾದಿಸಿದ್ದಾನೆ.

ಈ ಕೃತಿಯಲ್ಲಿ ಪ್ರತಿಪಾದಿತವಾಗಿರುವ ಇನ್ನೊಂದು ಮೌಲ್ಯ ಜೀವಹಾನಿ. ಕಥಾರಂಭದಲ್ಲಿಯೇ ಮಾರಿದತ್ತ ಎಂಬ ಅರಸನನ್ನು ಮುಂದು ಮಾಡಿಕೊಂಡು ಇಡೀ ಊರ ಜನರೆಲ್ಲ ಗ್ರಾಮ ದೇವತೆಗೆ ಬಲಿಕೊಡಲು ನೆರೆದಿರುತ್ತಾರೆ. ಈ ಸಂದರ್ಭದಲ್ಲಿ ನರಬಲಿಗಾಗಿ ಅಭಯರುಚಿ ಅಭಯಮತಿಯನ್ನು ಎಳೆದು ತರುತ್ತಾರೆ. ಆ ಸಂದರ್ಭದಲ್ಲಿ ಅಭಯ ರುಚಿ ಹೇಳಿದ 'ಯಶೋಧರ ಚರಿತೆ'ಯನ್ನು ಕೇಳಿ ಪಾವನನಾಗಿ, ಉಗ್ರತಪಸ್ಸನ್ನಾಚರಿಸುತ್ತಾ, ಸಮಾಧಿ ಮರಣ ಹೊಂದುತ್ತಾನೆ. ಬಳಿಕ ಈತ ಮೂರನೇಯ ಸ್ವರ್ಗದಲ್ಲಿ ದೇವತೆಯಾಗುತ್ತಾನೆ. ಈತ ನಿರಂತರವೂ ಗ್ರಾಮದ ಶಾಂತಿಗಾಗಿ, ಜನರ ನಂಬಿಕೆಗಾಗಿ ಹಿಂಸೆ ಎಂಬುವುದು ಪಾಪ ಎಂಬುದನ್ನು ಅರಿಯದೇ ಬಲಿಕೊಡುವುದೇ ಒಂದು ಮೌಲ್ಯ ಎಂದು ತಿಳಿದಿರುತ್ತಾನೆ. ಯಾವಾಗ ಅಭಯರುಚಿ ಹೇಳಿದ ಕಥೆಯಲ್ಲಿನ ಯಶೋಧರನ ಸಂಕಲ್ಪ ಹಿಂಸೆ(ಬಲಿ)ಯೇ ಇಷ್ಟೊಂದು ಕಷ್ಟಕ್ಕೆ ಒಯ್ದಿತು ಎಂದು ತಿಳಿಯುತ್ತಾನೋ ಆಗ ತಾನೂ

ಬದಲಾಗುತ್ತಾನೆ. ಜನರನ್ನು ಅಹಿಂಸೆಯ ಮಾರ್ಗಕ್ಕೆ ಕರೆದೊಯ್ಯುತ್ತಾನೋ ಆಗ ಆತನಿಗೆ ಮೋಕ್ಷ ಪ್ರಾಪ್ತವಾಗುತ್ತದೆ. ಅಂದರೇ ಅರಿಯದೆ ಮಾಡಿದ ಹಿಂಸೆ ಅರಿತು ಬದಲಾದರೆ ದೇವರೂ ಕ್ಷಮಿಸುತ್ತಾನೆ, ಎಂದು ತಿಳಿದ ಮೇಲಾದರೂ ಹಿಂಸೆ ಬಿಡಬೇಕೆಂಬ ಮೌಲ್ಯ ಪ್ರತಿಪಾದನೆಯಾಗಿದೆ.

ಇನ್ನು ಅಮೃತಮತಿಯ ಜಾರತನವನ್ನು ಕಂಡ ರಾಜ ತನ್ನ ತಾಯಿಗೆ ಆಕೆಯ ಹಾದರದ ವಿಚಾರವನ್ನು ಮುಚ್ಚಿಟ್ಟು ಕನಸಿನ ನೆಪವನ್ನು ಹೇಳುತ್ತಾನೆ. ಸತ್ಯವನ್ನು ಮರೆಮಾಚಿ ಸುಳ್ಳನ್ನು ಹೇಳುತ್ತಾನೆ. ಆಗ ತಾಯಿ ಚಂದ್ರಮತಿ ಪ್ರಾಣಿ ಬಲಿಗೆ ಪ್ರಚೋದಿಸುತ್ತಾಳೆ. ಆದರೆ ಪ್ರಾಣಿ ಹಿಂಸೆ ಕೂಡದು ಎಂದು ಅರಿವಿದ್ದ ಯಶೋಧರ ಅದಕ್ಕೊಪ್ಪುವುದಿಲ್ಲ. ಆತನಿಗೆ ಹಿಂಸೆ ಸಲ್ಲದು ಎಂಬ ಅರಿವಿತ್ತಾದರೂ ತಾಯಿಯ ಮಾತಿಗೆ ಕಟ್ಟು ಬೀಳುತ್ತಾನೆ. ಬಲಿ ಕೊಡಲು ಒಪ್ಪುತ್ತಾನೆ. ಕಾರಣ ತಾಯಿ ತಾನೇ ಸಾಯುವುದಾಗಿ ಹೆದರಿಸುತ್ತಾಳೆ. ಆಗ ಯಶೋಧರ ತನಗೆ ಎಂಥ 'ಪಾಪಮಿದಿರ್ವಂದಪುದೋ' ಎಂದುಕೊಂಡು (3–21) 'ಮಾಡದೊಡೆ ತಾಯ್ಗೆ ಮರಣಂ ಮಾಡಿದೊಡಿನ್ನೊಂದು ಗತಿಗೆ ಕೇಡೆಂದು' (3–22) ಬಗೆದು ತಾಯಿಯ ಮೇಲಿನ ಮೋಹದಿಂದ ಅವಳ ಮಾತಿಗೆ ಒಪ್ಪಿಗೆಯನ್ನಿತ್ತು ಹಿಟ್ಟಿನ ಹುಂಜವನ್ನು ಬಲಿ ಕೊಡುತ್ತಾನೆ. ಆ ಸಂದರ್ಭದಲ್ಲಿ ಆ ಹಿಟ್ಟಿನ ಹುಂಜದಲ್ಲಿ ಅಡಗಿದ್ದ ಬೆಂತರವು ಕುಕ್ಕೂಕ್ಕೂ ಎಂದು ಕೂಗಿತಂತೆ. ಆಗ ಯಶೋಧರನು ಮಾನಸಿಕವಾಗಿ ದೈಹಿಕವಾಗಿ ಬಹಳಷ್ಟು ನೋವನ್ನು ಅನುಭವಿಸುತ್ತಾನೆ. ಇಲ್ಲಿ ಯಶೋಧರ ಮತ್ತು ಚಂದ್ರಮತಿ 'ಸಂಕಲ್ಪ ಹಿಂಸೆ'ಯಿಂದ ಆರುಬಾರಿ ತಿರ್ಯಗ್ಯೋನಿಯಲ್ಲಿ ಜನ್ಮವೆತ್ತಿ ಸತ್ತು, ಕೋಳಿಯ (ಆರನೆಯ)ಜನ್ಮದಲ್ಲಿದ್ದಾಗ ವ್ರತವನ್ನು ಧರಿಸಿದ ಕಾರಣದಿಂದ ಮನುಷ್ಯ ಜನ್ಮವನ್ನು ಪಡೆಯುತ್ತಾರೆ; ಅಭಯರುಚಿ ಅಭಯಮತಿಗಳಾಗಿ ಹುಟ್ಟುತ್ತಾರೆ. ಎಳೆ ವಯಸ್ಸಿನಲ್ಲೇ ಅವರು ಸುದತ್ತಾಚಾರ್ಯರ ಶಿಷ್ಯರಾಗಿ, ಮರಣಾನಂತರ ಈಶಾನಕಲ್ಪದಲ್ಲಿ ಜನಿಸುತ್ತಾರೆ. ಈಶಾನಕಲ್ಪವೆಂದರೆ, ಜೈನರ ಪ್ರಕಾರ ಹದಿನಾರು ಸ್ವರ್ಗಗಳಲ್ಲಿ ಎರಡನೆಯದು ಮೂರನೆಯ ಸ್ವರ್ಗವು ಇದಕ್ಕಿಂತ ಮೇಲಿರಬೇಕು ತಾನೆ? ಹಲವು ಪ್ರಾಣಿಗಳನ್ನು ಪ್ರತಿವರ್ಷ ಹಿಂಸೆ ಮಡುತ್ತಿದ್ದ ಮಾರಿದತ್ತ 'ಯಶೋಧರ ಚರಿತೆ'ಯನ್ನು ಕೇಳಿದ ಮೇಲೆ ಉಗ್ರ ತಪಸ್ಸನ್ನಾಚರಿಸಿ, ಸಮಾದಿ ಮರಣಾನಂತರ ಮೂರನೇ ಸ್ವರ್ಗದಲ್ಲಿ ದೇವನಾಗಿ ಹುಟ್ಟುತ್ತಾನೆ.

ಯಶೋಧರನು ಕೇವಲ ಸಂಕಲ್ಪ ಹಿಂಸೆಯಿಂದ ಕೊಲ್ಲಬೇಕೆಂದು ಎನಿಸಿಕೊಂಡಿದ್ದರಿಂದ ಬೇರೆ–ಬೇರೆ ಜನ್ಮಗಳನ್ನು ಪಡೆದು ಕೊನೆಗೆ ದೊರೆಯುವುದು ಎರಡನೆಯ ಸ್ವರ್ಗ; ಚಂಡಶಾಸನನ ನಿರಂತರ ಹಿಂಸೆಯ ಬಳಿಕ ದೊರೆಯುವುದು ಮೂರನೆಯ ಸ್ವರ್ಗ; ಅದು ಹಲವು ಜನ್ಮಗಳನ್ನು ಪಡೆಯದೇ. ಅಂದರೆ ಇಲ್ಲಿ ಸಂಕಲ್ಪ ಹಿಂಸೆಯೇ ದೊಡ್ಡಪಾಪ. ನಿಜವಾದ ಹಿಂಸೆ, ಅಷ್ಟು ದೊಡ್ಡ ಪಾಪವಲ್ಲ ಎಂದು ಎನಿಸದೇ ಇರದು. ಆದರೆ ಮಾರಿದತ್ತ ಮಡುತ್ತಿದ್ದ ಹಿಂಸೆ ಹಿಂಸೆಯೆಂಬ ಎಣಿಕೆಯಿಂದಲ್ಲ ದೇವಿಯ ಅರ್ಚನೆಗಾಗಿ .ಅದು ಜನರ, ರಾಜ್ಯದ ಸುಖಕ್ಕಾಗಿ, ಎಂಬ ಭಾವದಿಂದ. ಯಶೊಧರನಾದರೋ 'ಜೀವದಯೆ ಜೈನಧರ್ಮಂ' ಎಂಬ ಅರಿವಿದ್ದೂ, ತನಗಂಟಿದ ಪಾಪ ನಿವಾರಣೆಗಾಗಿ ಅಂದರೆ ವೈಯಕ್ತಿಕ ಹಿತಕ್ಕಾಗಿ. ಹಾಗಾಗಿ ಹಿಟ್ಟಿನ ಕೋಳಿಯನ್ನು ಕೊಲ್ಲವುದಕ್ಕೆ ಮನಸ್ಸು ಮಾಡಿ ಅಪರಾಧ (ಪಾಪ)ವನ್ನು ಮಾಡಿದನು ಎನ್ನಬೇಕು. ಅಂದರೆ ತನ್ನ ಸ್ವಾರ್ಥಕ್ಕಾಗಿ ಮಾಡುವ ಹಿಂಸೆ ಜೀವಹಾನಿ ಸಲ್ಲದು, ಅದು ಪಾಪಕಾರ್ಯ ಎಂಬ ಮೌಲ್ಯದ ಪ್ರತಿಪಾದನೆಯನ್ನು ನಾವಿಲ್ಲಿ ಕಾಣುತ್ತೇವೆ.

ಹಾಗೆಯೇ ಯಶೋಧರನು ಬೇರೆ ಹಿಂಸೆಯನ್ನೇ ಮಾಡಿಲ್ಲವೇ? ಅವನ ಅಸಿಲತೆಗೆ (ಖಡ್ಗಕ್ಕೆ) ಯುದ್ಧದಲ್ಲಿ ಕೊಲ್ಲುವುದು ರಸದೌತಣವಾಗಿತ್ತು. ವಿಜಿಗೀಷು ವೃತ್ತಿ ರಾಜಧರ್ಮವಾದುದರಿಂದ ಅವನು ಆ ರೀತಿ ಶತ್ರುಗಳನ್ನು ಕೊಂದಿದ್ದಾನೆಂದೂ, ಅದು ಅಪರಾಧವಾಗದೇ ಮೌಲ್ಯಕ್ಕೆ ವಿರುದ್ಧವಾಗದೇ ಅದೇ ಮೌಲ್ಯವಾಗಿದ್ದಿತೆನ್ನಬಹುದು. ಹಾಗೆಯೇ ಅವನ ಮಗ ಯಶೋಮತಿ ಬೇಟೆಯ ನೆವದಿಂದ ಎಷ್ಟು ಜೀವ ಹಿಂಸೆ ಮಾಡಿಲ್ಲ? ಅನಿಗೇನು ಗತಿ ಒದಗಿತೆಂಬುದು ತಿಳಿಯುವುದಿಲ್ಲ.

ಯಶೋಧರನು ಎರಡನೆಯ ಸ್ವರ್ಗವಾದ ಈಶಾನ್ಯ ಕಲ್ಪಕ್ಕೆ ಮಾತ್ರ ಅರ್ಹನಾದುದಕ್ಕೆ ಅವನು ಸತ್ಯವೃತವನ್ನು ಪಾಲಿಸದಿದ್ದುದೂ ಕಾರಣವಿರಬಹುದು. ಅಮೃತಮತಿ ಅಷ್ಟಾವಂಕನಲ್ಲಿ ಕಾಮುಕತನದಿಂದ ವ್ಯಭಿಚಾರಿಣಿಯಾಗಿದ್ದಳೆಂಬುದನ್ನು ತನ್ನ ತಾಯಿಗೆ ಹೇಳುವಾಗ ಅದನ್ನು ಮರೆಮಾಚಿ ಕನಸಿನ ನೆವದಿಂದ ಹೇಳಿದನು, ಇದರಿಂದಾಗಿ ಅವನಿಗೆ ಈಶಾನ್ಯ ಕಲ್ಪದಲ್ಲಿ ಜನ್ಮವೊದಗಿರಬಹುದಾಗಿದೆ. ಸುಳ್ಳು ಹೇಳುವುದೂ ಮೌಲ್ಯಕ್ಕೆ ವಿರುದ್ಧವಾದುದರ ಪ್ರತಿಪಾದನೆ ಇಲ್ಲಿದೆ.

ಒಟ್ಟಾರೆ ಈ ಕಾವ್ಯದ ಮೌಲ್ಯ ಪ್ರತಿಪಾದನೆಯೆಂದರೆ ಅಹಿಂಸೆ, ಅನೃತ ಮತ್ತು ವ್ಯೆಭಿಚಾರಗಳನ್ನು ಮಾಡಬಾರದೆಂಬುದಾಗಿದೆ. ಒಂದುವೇಳೆ ತಿಳಿಯದೇ ಮಾಡಿದ ಪಾಪಕೃತ್ಯ ತಿಳಿದ ಮೇಲೆ ತಿದ್ದಿ ನಡೆದರೆ, ಪುರಾಣ ಕಥೆಗಳನ್ನು ಶ್ರವಣ ಮಾಡುವುದರಿಂದ, ಓದುವುದರಿಂದ ಪಾಪಪರಿಹಾರವಾಗುತ್ತದೆಂಬ ಮೌಲ್ಯದ ಪ್ರತಿಪಾದನೆಯನ್ನೂ ಗುರುತಿಸಬಹುದಾಗಿದೆ.

ಆಕರ ಗ್ರಂಥ :

1. ಜನ್ನನ ಯಶೋಧರ ಚರಿತ್ರೆ – ತೆಕ್ಕುಂಜ ಗೋಪಾಲಕೃಷ್ಣ ಭಟ್ (ಸಂ), ಪ್ರ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು (1977)

####